ಹುದ್ದೆಗಳಿಗೆ ಎರಡೂವರೆ ವರ್ಷವಾದರು ಭರ್ತಿಮಾಡಿಲ್ಲ, ಅದಕ್ಕೆ 3 ಕಾರಣಗಳನ್ನು ಕೊಟ್ಟಿದ್ದಾರೆ, ಒಂದು, ರಾಜ್ಯದ ಮಿಾಸಲಾತಿ ನೀತಿಯಲ್ಲಿ ಬದಲಾವಣೆಯಾದದ್ದು, ಅದರ ಮೇಲೆ ಸುಪ್ರೀಂಕೋರ್ಟ್ ಆಜ್ಞೆ ಹಾಗೂ ಕರ್ನಾಟಕ ಆಡಳಿತ ಮಂಡಳಿ ಅಧ್ಯಕ್ಷರೇ ಈಗಾಗಲೇ ರಾಜ್ಯದಲ್ಲಿ ಮಿಾಸಲಾತಿ ನೀತಿ ನಿಗದಿಯಾಗಿದ್ದು ಅದರ ಬಗ್ಗೆ ಅವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಲಿ ದಾವೆ ಹೂಡಿದೆಯೆಂದು ತಿಳಿಸಿದ್ದಾರೆ. ನಮ್ಮ ವಕೀಲರು ಸರ್ಕಾರದ ವತಿಯಿಂದ ಕೇಸುಗಳನ್ನು ತ್ವರಿತವಾಗಿ ಮುಗಿಸುವಲ್ಲಿ ವಿಫಲರಾಗಿದ್ದಾರೇನೋ ಎಂಬ ಸಂಶಯ ಬರುತ್ತಿದೆ, ಎರಡೂವರೆ ವರ್ಷವಾದರೂ ಈ ಕೇಸ್ ಮುಗಿಸಲು ಸರ್ಕಾರಿ ವಕೀಲರು ಏಕೆ ಪ್ರಯತ್ನಿಸಿಲ್ಲ? ಕೂಡಲೇ ಈ ಕೇಸುಗಳನ್ನು ಮುಗಿಸಿ ನೇಮಕಾತಿ ಕೆಲಸ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ.ವರದೇಗೌಡ:- ಅಧ್ಯಕ್ಷರೇ 9-9-94ರಲ್ಲಿ ಉಚ್ಚ ನ್ಯಾಯಾಲಯ 60 ಪರ್ಸೆಂಟ್ ಮಿಾಸಲಾತಿ ಬಗ್ಗೆ ಇದ್ದುದನ್ನು 50 ಪರ್ಸೆಂಟಿಗೆ ಇಳಿಸಲಾಗಿದೆ. 5-3-96ರಲ್ಲಿ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿದ್ದೇವೆ. 24-1-94ರ ಪಟ್ಟಿ ಪ್ರಕಾರ ವಯೋಮಿತಿ ಇತ್ತೋ ಅದರನ್ವಯ ಆಗಸ್ಟ್ ಅಂತ್ಯದಲ್ಲಿ ಅವರನ್ನೆಲ್ಲ ಕೆಲಸಕ್ಕೆ ತೆಗೆದುಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನಪಡುತ್ತೇವೆ.

ಶ್ರೀ ಯು.ಬಿ.ಬಣಕಾರ್:- ಕರ್ನಾಟಕ ನ್ಯಾಯ ಮಂಡಲಿಯಲ್ಲಿ ದಾವೆ ಇರುವುದರಿಂದ ಒಂದು ತಿಂಗಳಲ್ಲಿ ಇವರಿಗೆ ಮಾಡಲು ಸಾಧ್ಯವೋ?

ಅಧ್ಯಕ್ಷರು:- ಒಂದು ಪಟ್ಟಿ ಆಗಲೇ ಪ್ರಕಟಿಸಿದ್ದೇವೆ, ಉಳಿದಿದ್ದನ್ನು ಆಗಸ್ಟ್ ಅಂತ್ಯದಲ್ಲಿ ಮಾಡುತ್ತೇವೆ ಅಂತ ಕ್ಲಿಯರಾಗಿ ಹೇಳಿದರು.

ವಿಷಯ:- ಬೆಂಗಳೂರು ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 147 (938)

ಶ್ರೀ ಎನ್.ರಾಜಣ್ಣ (ಭಾರತಿನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು.

ಇ) ಇಲ್ಲದಿದ್ದಲ್ಲಿ, 1996-97ನೇ ಸಾಲಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಬೆಂಗಳೂರು ನಗರದಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ಯಾವುದೇ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1996-97ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ 40 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸಮಾಜ ಕಲ್ಯಾಣ ಇಲಾಖಾವತಿಯಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀ ಎನ್.ರಾಜಣ್ಣ:- ಬೆಂಗಳೂರು ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಿರುವುದಿಲ್ಲವೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಒಟ್ಟು ಎಷ್ಟು ಮೊರಾರ್ಜಿ ವಸತಿ ಶಾಲೆಗಳನ್ನು ನಡೆಸುತ್ತಿದ್ದೀರಿ. ಅದರಲ್ಲೂ ಬೆಂಗಳೂರಿನಲ್ಲಿ ತಾವು ಏಕೆ ಪ್ರಾರಂಭಿಸುವುದಿಲ್ಲವೆಂದು ಹೇಳುತ್ತಿದ್ದೀರಿ. ಬೆಂಗಳೂರು ಗ್ರಾಮಾಂತರದಲ್ಲಿ ಇಂತಹ ಎಷ್ಟು ಶಾಲೆಗಳನ್ನು ತೆಗೆಯಬೇಕೆಂದು ಇದ್ದೀರಿ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಕರ್ನಾಟಕದಲ್ಲಿ ನಮ್ಮ ಇಲಾಖೆಯಿಂದ ಈ ಸಲ 40 ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಉದ್ದೇಶಿಸಲಾಗಿದೆ. ಬೆಂಗಳೂರು ನಗರದಲ್ಲಿ ಮಾತ್ರ ಅದರ ಪ್ರಸ್ತಾವನೆ ಸರಕಾರದ ಮುಂದೆ ಇಲ್ಲ. ಇಲ್ಲಿ ವಸತಿ ಸಮಸ್ಯೆ ಬೃಹದಾಕಾರವಾಗಿ ಇರುವುದೇ ಮುಖ್ಯವಾದ ಕಾರಣ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಶಾಲೆಗಳನ್ನು ತೆರೆಯಬೇಕೆಂದಿದ್ದೇವೆ.

ಶ್ರೀ ಎನ್.ರಾಜಣ್ಣ:- ಬೆಂಗಳೂರು ಗ್ರಾಮಾಂತರದಲ್ಲಿ ತೆಗೆದರೆ.....

ಅಧ್ಯಕ್ಷರು:- ಬೆಂಗಳೂರು ಗ್ರಾಮಾಂತರ ಎಂದರೆ ಅದು ಬೇರೆ ಪ್ರಶ್ನೆಯೇ ಆಯಿತಲ್ಲ ಅದಕ್ಕೆಲ್ಲಿ ಅವರು ಉತ್ತರ ತಂದಿರುತ್ತಾರೆ? ಸಿಟಿಯನ್ನು ಕೇಳಿದ್ದೀರಿ, ಸಿಟಿ ಬಗ್ಗೆ ಉತ್ತರ ತಂದಿದ್ದಾರೆ.

ಶ್ರೀ ಎನ್.ರಾಜಣ್ಣ:- ಬೆಂಗಳೂರು ಗ್ರಾಮಾಂತರ ಸಿಟಿಗೆ ಅಟ್ಯಾಚ್ ಆಗಿದೆ.

ಅಧ್ಯಕ್ಷರು:- ಆಗಿದೆ ಆದರೆ ಉತ್ತರ ಅಟ್ಯಾಚ್ ಆಗಿಲ್ಲವಲ್ಲ. ಮುಂದಿನ ಸಲ ಉತ್ತರ ಬರುವಾಗ ಆನ್ಸರ್ ಕೂಡ ಅಟ್ಯಾಚ್ ಮಾಡಿಕೊಂಡು ಬರುವುದಕ್ಕೆ ಹೇಳುತ್ತೇನೆ.

ಶ್ರೀ ಎನ್.ರಾಜಣ್ಣ:- ಪ್ರಶ್ನೆ (ಇ)ನಲ್ಲಿ ಹೇಳುತ್ತಿದ್ದಾರೆ. 1996-97ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ 40 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಸಮಾಜಕಲ್ಯಾಣ ಇಲಾಖೆವತಿಯಿಂದ ತೆಗೆಯುತ್ತೇವೆಂದು ಹೇಳಿದ್ದೀರಿ. ಆದರೆ ದಿವಂಗತ ಮೊರಾರ್ಜಿ ದೇಸಾಯಿ, ಗಾಂಧೀಜಿಯವರು ಹೇಳಿದಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು ಮಾತ್ರವಲ್ಲ ಬಡವರಿಗೂ ತಾವು ಓದುವುದಕ್ಕೆ ಅನುಕೂಲವಾಗುವಂತೆ ಅಲ್ಲಿ ಸ್ಥಳಾವಕಾಶ ಮಾಡಿಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ 75 ಪರ್ಸೆಂಟ್ ಹಿಂದುಳಿದವರಿಗೆ 25 ಪರ್ಸೆಂಟ್ ಎಂದು ನಿಗದಿ ಮಾಡಿದ್ದೇವೆ.

ಶ್ರೀ ಎನ್.ರಾಜಣ್ಣ:- ಈ ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಗಾಂಧೀಜಿ ಮೊರಾರ್ಜಿ ದೇಸಾಯಿಯವರ ತತ್ವ ಆದರ್ಶಗಳ ಬಗ್ಗೆ ತಿಳುವಳಿಕೆ ನೀಡಲು ಅನುಕೂಲವಾಗುವಂತೆ ಬೋಧನೆ ಮಾಡುವುದಕ್ಕೇನಾದರೂ ಯೋಜನೆ ಇದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಅದರ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಎನ್.ರಾಜಣ್ಣ:- ನಾವು ಶಾಲೆ ಮಾಡುತ್ತಿರುವುದು ಗಾಂಧಿ ಹೆಸರಿನಲ್ಲಿ.

ಅಧ್ಯಕ್ಷರು:- ನೀವು ದಿವಸ ಬ್ರಿಟಿಷ್ ಡೇಸ್ ಎಂದು ಹೇಳುತ್ತಿದ್ದೀರಿ. ಈಗ ಮೊರಾರ್ಜಿಗೆ, ಗಾಂಧಿಗೆ ಬಂದಿದ್ದೀರಿ ಇದು ಹೇಗೆ?

ಶ್ರೀ ಎನ್.ರಾಜಣ್ಣ:- ಗಾಂಧೀಜಿ ನಮಗೆ ಸ್ವಾತಂತ್ರ್ಯ ತಂದು ಕೊಟ್ಟರು. ಅವರ ಹತ್ತಿರ there was descipline, there was efficiency, there was sincerity, there was hard work. ಗಾಂಧಿಯವರ ಪಾಲಿಸಿ ಬಂದರೆ ಚೆನ್ನಾಗಿ ಆಗುತ್ತದೆಂದು ಕೇಳುತ್ತಿದ್ದೇನೆ ಅಷ್ಟೆ ಇನ್ನೇನೂ ಇಲ್ಲ. I do not know whether Gandhian economy is possible to be introduced in these schools?

MR.SPEAKER:- He will examine it.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಆಧುನಿಕ ಯುಗದಲ್ಲಿ ಈ ಸಮಾಜದ ವ್ಯವಸ್ಥೆಯಲ್ಲಿ ಏನು ಇದೆ ಆ ಉದ್ದೇಶದಿಂದ ನಾವು ಏನಾದರೂ ವಿದ್ಯಾಭ್ಯಾಸಕ್ಕೆ ಹೋದರೆ ಇವರು ಹೇಳತಕ್ಕಂತಹ ಆದರ್ಶಗಳಿಗೆ ಬೇರೆ ಶಾಲೆಯನ್ನು ತೆರೆಯಬೇಕಾಗುತ್ತದೆ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎನ್.ರಾಜಣ್ಣ:- ಗಾಂಧೀ, ಮೊರಾರ್ಜಿ ಹೆಸರಿನಲ್ಲಿ ಗಾಂಧಿ ತತ್ವವನ್ನು ಏಕೆ ಹೇಳಿಕೊಡಬಾರದು? ಗಾಂಧಿ ತತ್ವ ಹೇಳಿಕೊಟ್ಟರೆ ಗಾಂಧಿ ಎಕಾನಮಿ ಬಂದರೆ ನಮ್ಮ ರಾಜಕಾರಣಿಗಳಿಗೆ ಕೆಲಸ ಕಡಿಮೆಯಾಗುತ್ತದೆ. ಬಡವ ಬಲ್ಲಿದರು ಮಾರುಕಟ್ಟೆಗೆ ಬ್ಯಾಗ್ ತೆಗೆದುಕೊಂಡು ಹಣ ಜೇಬಿನಲ್ಲಿಟ್ಟುಕೊಂಡು ಹೋದರೆ ಬ್ಯಾಗ್ ತುಂಬಾ ಸಾಮಾನು ತೆಗೆದುಕೊಂಡು ಬರುವಂತಹ ಎಕಾನಮಿ ಬರುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಬಿ.ಆರ್.ಯಾವಗಲ್:- ಮೊರಾರ್ಜಿ ದೇಸಾಯಿಯವರ ಶಾಲೆಗಳನ್ನು ತೆರೆಯಬೇಕೆಂದು ಹೇಳುತ್ತಿದ್ದೀರಿ ಇದನ್ನು ತೆಗೆಯುವುದಕ್ಕೆ ತಾವು ಏನು ಅಳತೆಗೋಲನ್ನು ಅಡಾಪ್ಟ್ ಮಾಡುತ್ತೀರಿ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಈಗ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ವಸತಿ ಶಾಲೆಯನ್ನು ಕೇಂದ್ರದವರು ನವೋದಯ ಶಾಲೆ ಎಂದು ತೆರೆದಿದ್ದಾರೆ. ಅದೇ ಮಾದರಿಯಲ್ಲಿಯೇ ಪರಿಶಿಷ್ಟ ಜಾತಿ ಪರಿಶಿಷ್ಟ ಜಾತಿ ಮಕ್ಕಳಿಗೆ ಒಂದು ಒಳ್ಳೆಯ ವಾತಾವರಣದಲ್ಲಿ ವಿದ್ಯಾಭ್ಯಾಸ ಕೊಟ್ಟರೆ ಆ ಒಂದು ಬೆಳವಣಿಗೆಯಿಂದ ಅವರು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆನ್ನುವ ವಿಶಾಲವಾದ ದೃಷ್ಟಿ ಇಟ್ಟುಕೊಂಡಿದ್ದೇವೆ. ವಸತಿ ಶಾಲೆಯಲ್ಲಿ 5ನೇ ತರಗತಿಯಿಂದ 8ನೇ ತರಗತಿವರೆಗೆ ಪ್ರತಿಯೊಂದು ವರ್ಷದಲ್ಲಿ 50 ಜನರನ್ನು ಸೇರಿಸತಕ್ಕಂತಹ ಯೋಜನೆ ಇದೆ. ಸುಮಾರು 300 ಜನ ವಿದ್ಯಾರ್ಥಿಗಳು ಒಂದು ಶಾಲೆಯಲ್ಲಿರುತ್ತಾರೆ.

ಅಧ್ಯಕ್ಷರು:- ನಿಮ್ಮ ಯಾರ್ಡ್ ಸ್ಟಿಕ್ ಏನು ಎಂದು ಅವರು ಕೇಳುತ್ತಿರುವುದು ಯಾವ ಗ್ರೌಂಡ್ಸ್ ಎಂದು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- 50 ಜನ ಇರಬೇಕು. ಅದರ ವಿಧಿ ವಿಧಾನಗಳ ಬಗ್ಗೆ ಪ್ರಸ್ತಾವನೆಯಲ್ಲಿದೆ ಅದರ ಬಗ್ಗೆಯೂ ಚರ್ಚೆ ಕೂಡ ಮಾಡುತ್ತಿದ್ದೇವೆ. ಯಾವ ರೀತಿ ಉಪಾಧ್ಯಾಯರನ್ನು ನೇಮಕ ಮಾಡಬೇಕು ಯಾವ ಇಲಾಖೆಯಿಂದ ಉಪಾಧ್ಯಾಯರನ್ನು ತರಬೇಕು ಎಂಬ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾವು ಕೇಂದ್ರದವರು ನಡೆಸುತ್ತಿರುವವರ ಕೂಡ ವಿಚಾರ ಮಾಡುತ್ತಿದ್ದೇವೆ.

ಶ್ರೀ ಬಿ.ಆರ್.ಯಾವಗಲ್:- 40 ಶಾಲೆಗಳನ್ನು ತೆಗೆಯಲಿಕ್ಕೆ ಯೋಜನೆ ಹಾಕಿಕೊಂಡಿದ್ದೀರಿ, 40 ತಾಲ್ಲೂಕುಗಳಲ್ಲಿ ಶಾಲೆ ತೆಗೆಯುತ್ತಿದ್ದೀರಿ ಅದನ್ನು ಹಿಂದುಳಿದ ಆಧಾರದ ಮೇಲೆಯೋ ಇಲ್ಲವೇ ಪರಿಶಿಷ್ಟ ಜಾತಿ ವರ್ಗದವರು ಹೆಚ್ಚು ಸಂಖ್ಯೆ ಇದ್ದಲ್ಲಿ ಇಲ್ಲವೇ ಮತ್ಯಾವ ಆಧಾರದ ಮೇಲೆ ತೆಗೆಯುತ್ತೀರಿ ಎಂಬ ಬಗ್ಗೆ ವಿವರ ಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಪ್ರತಿಯೊಂದು ಜಿಲ್ಲೆಯ ಸಬ್‌ಡಿವಿಜನ್‌ನಲ್ಲಿ ಒಂದೊಂದು ಶಾಲೆಯನ್ನು ತಾತ್ಕಾಲಿಕವಾಗಿ ತೆರೆಯಬೇಕೆಂದು ಇದ್ದೇವೆ. ಸರಕಾರದ ಯೋಜನೆ, ಮುಂದೆ ನಮ್ಮ ಹಣಕಾಸಿನ ಪರಿಸ್ಥಿತಿ ಸರಿ ಹೋದಲ್ಲಿ ಪ್ರತಿ ಕ್ಷೇತ್ರದಲ್ಲೂ ಒಂದೊಂದು ಶಾಲೆ ತೆರೆಯಬೇಕೆಂದು ಉದ್ದೇಶ ಇದೆ. ಪ್ರಾಯೋಗಿಕವಾಗಿ ಈ ಸಾಲಿನಲ್ಲಿ 40 ಶಾಲೆಗಳನ್ನು ತೆರೆಯುತ್ತಿದ್ದೇವೆ. ಯೋಜನಾ ಬದ್ಧವಾಗಿ ಕಾರ್ಯಕ್ರಮ ನಮ್ಮ ಹತ್ತಿರ ಇದೆ. ಯಾವ ರೀತಿ ಉಪಾಧ್ಯಾಯರನ್ನು ನೇಮಿಸಬೇಕು, ಎಷ್ಟು ಜನ ಇರಬೇಕು, ವಸತಿ ಯಾವ ರೀತಿ ಇರಬೇಕು, ಎಂಥ ಶಿಕ್ಷಣ ಕೊಡಬೇಕು ಎನ್ನುವುದು ಕೂಡ ಈ ಯೋಜನೆಯಲ್ಲಿ ಇದೆ.

ಶ್ರೀ ವೈ.ರಾಮಕೃಷ್ಣ:- ಪ್ರತಿಯೊಂದು ಜಿಲ್ಲೆಯಲ್ಲೂ ತೆಗೆಯುತ್ತೇವೆಂದು ಹೇಳಿದಿರಿ. ಬೆಂಗಳೂರು ನಗರ ಜಿಲ್ಲೆ ಅಲ್ಲವೇ? ಇಲ್ಲಿ ಏಕೆ ತೆಗೆಯುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಬೆಂಗಳೂರು ನಗರದಲ್ಲೇ ಹರಿಜನರು ಹೆಚ್ಚು ಇದ್ದಾರೆ. ಅಲ್ಲೇ ಏಕೆ ತೆಗೆಯುವುದಿಲ್ಲವೆಂದು ಹೇಳುತ್ತಿದ್ದೀರಿ. ಬೇರೇನಾದರೂ ಕಾರಣ ಇದೆಯೇ ಅಥವಾ

ಇದನ್ನೆಲ್ಲಾ ಪರಿಗಣಿಸಿ ಬೇರೆ ಕಡೆ 1 ಕೊಟ್ಟಿದ್ದೀರಿ ಬೆಂಗಳೂರು ನಗರದಲ್ಲಿ ಜಾಸ್ತಿ ಇರುವುದರಿಂದ 2 ಕೊಡುವುದಕ್ಕೆ ಸಾಧ್ಯವೇ? 40 ಇರುವುದನ್ನು 42 ಮಾಡಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಬೆಂಗಳೂರು ನಗರದಲ್ಲಿ ತರೆಯಬಾರದೆಂದೇನೂ ಇಲ್ಲ. ಬೆಂಗಳೂರು ನಗರದಲ್ಲಿ ಸಧ್ಯಕ್ಕೆ ಈ ವರ್ಷ ತೆಗೆಯುವುದಕ್ಕೆ.....

ಅಧ್ಯಕ್ಷರು:- ಮಾನ್ಯ ವೈ.ರಾಮಕೃಷ್ಣ ಅವರ ಸಮಸ್ಯೆ, ಅವರು ಪ್ರತಿನಿಧಿಸತಕ್ಕಂತಹ ಕ್ಷೇತ್ರ ಆನೇಕಲ್. ಗ್ರಾಮಾಂತರ ಪ್ರದೇಶವಾದರೂ ಕೂಡ ಇದು ಬೆಂಗಳೂರು ನಗರ ಜಿಲ್ಲೆಗೆ ಬರುತ್ತದೆ. ಆದ್ದರಿಂದ ಬೆಂಗಳೂರು ನಗರ ಜಿಲ್ಲೆಗೂ ಕೂಡ ಈ ಸೌಲಭ್ಯವನ್ನು ವಿಸ್ತರಿಸುತ್ತೀರೋ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಖಂಡಿತವಾಗಿ ಪ್ರಸ್ತಾವನೆ ಬಂದರೆ ಅದನ್ನು ಮುಂದಿನ ಸಾಲಿನಲ್ಲಿ ಪರಿಶೀಲಿಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ವಸತಿ ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ಪ್ರಾರಂಭ ಮಾಡಿದ್ದೀರೋ ಅದು ಸಫಲತೆಯನ್ನು ಕಂಡಿದೆಯೇ? ಬಿಜಾಪುರ ಜಿಲ್ಲೆಯ ಬಂತನಾಳ ವಸತಿ ಶಾಲೆ ಇದೆ ಅಲ್ಲಿ ನೂರು ಜನ ವಿದ್ಯಾರ್ಥಿಗಳು ಇದ್ದಾರೆ. ಆದರೆ ಶಿಕ್ಷಕರು ಇರುವುದು ಬಹಳ ಕಡಿಮೆ. ಅಲ್ಲಿ ಹೆಡ್ ಮಾಸ್ಟರ್ ಮತ್ತೊಬ್ಬರು ಡೆಪ್ಯುಟೇಷನ್ ಮೇಲೆ ಬಂದಂತಹ ಒಬ್ಬ ಶಿಕ್ಷಕರು. ಇಲ್ಲಿಯವರೆಗೂ ಪ್ರತ್ಯ ಪುಸ್ತಕ ಕೊಡುವುದಕ್ಕಾಗುತ್ತಿಲ್ಲ ವಸ್ತ್ರಗಳನ್ನೂ ಕೂಡ ಕೊಡುವುದಕ್ಕಾಗುತ್ತಿಲ್ಲ. ಹೀಗಿರುವಾಗ ಅವರಿಗೆ ಒಳ್ಳೆಯ ರೀತಿಯಿಂದ ಶಿಕ್ಷಣ ಒದಗಿಸುವುದಕ್ಕೆ ತಮ್ಮ ಕಡೆಯಿಂದ ಸಾಧ್ಯವಾಗುತ್ತದೆಯೋ ಅಥವ ಇಲ್ಲವೋ?

ಅಧ್ಯಕ್ಷರು:- ಚಿಮ್ಮನಕಟ್ಟಿಯವರೇ ನೀವು ಹಿಂದುಳಿದ ವರ್ಗಕ್ಕೆ ಸೇರಿದವರು ನೆಗಡಿ ಹಿಡಿದರೆ ಮೂಗನ್ನೇ ತೆಗೆದು ಹಾಕುವುದಕ್ಕಾಗುತ್ತದೆಯೇ? ಇದು ಇನ್ನೂ ಪ್ರಾರಂಭಿಕ ಹಂತದಲ್ಲಿದೆ ಎಂದು ಅವರು ಹೇಳುತ್ತಿದ್ದಾರೆ. ಇದು ಗುಡ್ ಸ್ಕೀಮ್ ಅದನ್ನು ಎನ್‌ಕರೇಜ್ ಮಾಡಿ.

ವಿಷಯ:- ಚಿಕ್ಕಮಗಳೂರು ನಗರಕ್ಕೆ ಯಗಚಿ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 148 (1061)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ನಗರಕ್ಕೆ ಯಗಚಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತರುವ ಕಾರ್ಯಕ್ರಮ ಸರ್ಕಾರದ ಮುಂದಿದೆಯೇ?

ಆ) ಸರ್ಕಾರವು ಯೋಜನೆಗಾಗಿ ಅನುಮತಿ ನೀಡಿದೆಯೇ? ನೀಡಿದ್ದಲ್ಲಿ ಇದರ